ದಿನಾಂಕ 30.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:-** ವಾದಿ ಪರ ಶ್ರೀ.ಕೆ.ಆರ್.ಎಂ ವಕೀಲ **ರಿಂದ**

ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ದಾವೆಗೆ ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ವಾದಿಯು ಸಾಕ್ಷ್ಯ ನುಡಿಯಲು ಬರೆದುಕೊಟ್ಟ ಅಧಿಕಾರ ಪತ್ರವನ್ನು ನಿ.ಪಿ-1 ಎಂದು,

2. ದಿನಾಂಕ 30.07.2009 ರಂದು 1 ಮತ್ತು 2 ನೇ ಪ್ರತಿವಾದಿ ಹಾಗೂ ಅವರ ಮೃತ ತಂದೆ ಈರಪ್ಪ ರವರು ಬರೆದು ಕೊಟ್ಟ ಖುಷ್ಕಿ ಜಮೀನಿನ ನೋಂದಾಯಿತ ಆಧಾರ ಪತ್ರವನ್ನು ನಿಪಿ 2 ಎಂದು, 1 ನೇ ಪ್ರತಿವಾದಿಯ ಸಹಿಯನ್ನು ನಿಪಿ 2ಎ ಎಂದು, 2 ನೇ ಪ್ರತಿವಾದಿಯ ಸಹಿಯನ್ನು ನಿಪಿ 2ಬಿ ಎಂದು ಹಾಗೂ ಮೃತ ಈರಪ್ಪ ರವರ ಸಹಿಯನ್ನು ನಿಪಿ 2ಸಿ ಎಂದು, ಸದರಿ ಪತ್ರಕ್ಕೆ ರಾಜೇಗೌಡ, ಮಂಜುನಾಥ ಮತ್ತು ಮಾದೇಗೌಡರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸಾಕ್ಷಿಯು ರಾಜೇಗೌಡರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2ಡಿ ಎಂದು, ಸಾಕ್ಷಿಯು ಮಂಜುನಾಥ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2ಇ ಎಂದು ಮತ್ತು ಸಾಕ್ಷಿಯು ಮಾದೇಗೌಡರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2ಎಫ್ ಎಂದು, ಪತ್ರವನ್ನು ವಸಂತಕುಮಾರ ಎಂಬ ಪತ್ರಬರಹಗಾರರು ಬರೆದಿದ್ದು ಅವರ ಸಹಿಯನ್ನು ನಿಪಿ 2ಜಿ ಎಂದು ಗುರುತಿಸಲಾಯಿತು.

3. ಕೆ.ಆರ್ ಪೇಟೆ ತಾಲ್ಲೂಕು ಕಿಕ್ಕೇರಿ ಹೋಬಳಿ, ಮಾಣಿಕ್ಯನಹಳ್ಳಿ ಗ್ರಾಮದ, ಸರ್ವೇ ನಂಬರ್ 8/8ರ 2020-21 ನೇ ಸಾಲಿನ ಪಹಣಿಯನ್ನು ನಿಪಿ 3 ಎಂದು,

4. ದಿನಾಂಕ 14.02.2020 ರಂದು ವಕೀಲರ ಮುಖಾಂತರ ಪ್ರತಿವಾದಿಗಳಿಗೆ ಹಾಗೂ ಅವರ ಮೃತ ತಂದೆಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ 4 ಎಂದು,

5. ದಿನಾಂಕ 17.10.2020 ರಂದು ವಕೀಲರ ಮುಖಾಂತರ ಪ್ರತಿವಾದಿಗಳಿಗೆ ಹಾಗೂ ಅವರ ಮೃತ ತಂದೆಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ 5 ಎಂದು,

6. ದಿನಾಂಕ 24.02.2021 ರಂದು ವಕೀಲರ ಮುಖಾಂತರ ಪ್ರತಿವಾದಿಗಳಿಗೆ ಹಾಗೂ ಅವರ ಮೃತ ತಂದೆಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ 6 ಎಂದು,

7. ದಿನಾಂಕ 28.10.2020 ರಂದು 1 ನೇ ಪ್ರತಿವಾದಿಯು ನೀಡಿದ ಜವಾಬು ನೋಟಿಸನ್ನು ನಿಪಿ 7 ಎಂದು ಗುರುತಿಸಲಾಯಿತು.

8. ದಿನಾಂಕ 21.01.2021 ರಂದು ಪ್ರತಿವಾದಿಗಳಿಗೆ ನೀಡಿದ ಲೀಗಲ್ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ 8 ಎಂದು ಗುರುತಿಸಲಾಯಿತು.

9. ಕೆ.ಆರ್ ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿ, ಮಾಣಿಕ್ಯನಹಳ್ಳಿ ಗ್ರಾಮದ, ಸರ್ವೆ ನಂಬರ್ 8/10 ರ 2025-26 ನೇ ಸಾಲಿನ ಪಹಣಿಯನ್ನು ನಿಪಿ 9 ಎಂದು,

10. ಕೆ.ಆರ್ ಪೇಟೆ ತಾಲ್ಲೂಕು ಕಿಕ್ಕೇರಿ ಹೋಬಳಿ, ಮಾಣಿಕ್ಯನಹಳ್ಳಿ ಗ್ರಾಮದ, ಸರ್ವೆ ನಂಬರ್ 8/9 ರ 2025-26 ನೇ ಸಾಲಿನ ಪಹಣಿಯನ್ನು ನಿಪಿ 10 ಎಂದು,

11. ಎಂ.ಆರ್.ನಂ.ಟಿ.32/2022-23 ರ ಎಂ.ಆರ್.ವಹಿಯನ್ನು ನಿ.ಪಿ11 ಎಂದು ಗುರುತಿಸಲಾಯಿತು.

ಈ ಎಲ್ಲಾ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಪ್ರತಿವಾದಿಗಳು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಕಾಲವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.